ಸೋಮವಾರಪೇಟೆ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿ ಸಿ ನಂ - 735/2021

ಪಿರ್ಯಾದಿಃ ಸೋಮವಾರಪೇಟೆ ಠಾಣೆ

ಃ ವಿ ಃ

ಆರೋಪಿ ಃ <u>ವಿಶ್ವನಾಥ.ಪಿ</u>

<u>ದೋಷಾರೋಪಣೆ</u>

ಶ್ರೀ. ಕೆ.ಗೋಪಾಲಕೃಷ್ಣ, ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂಡಾಧಿಕಾರಿಗಳು, ಸೋಮವಾರಪೇಟೆ, ಆದ ನಾನು ನಿಮ್ಮ ಮೇಲೆ ಅಂದರೆ

ಅರೋಪಿಃ ವಿಶ್ವನಾಥ.ಪಿ ಬಿನ್ ಲೇಟ್ ದೂರೆ ಪೂಜಾರಿ, 46 ವರ್ಷ, ಅರಿಸಿನಗುಪ್ಪೆ ಅಲುವರ, ತೊರೆಂದೂರು ಅಂಚೆ, ಸೋಮವಾರಪೇಟೆ.

ಈ ಕೆಳಗಿನಂತೆ ಅಪಾದನೆಯನ್ನು ಹೊರೆಸಿದ್ದೇನೆ .

ದಿಃ 25-05-2021 ರಂದು ಚಾಸಾ 1 ರಿಂದ 3 ಮತ್ತು ಚಾಸಾ 1 ರವರ ಮಕ್ಕಳಾದ ಭುವನ್.ಬಿ.ಕೆ ಹಾಗೂ ಧನುಷ್ ರವರನ್ನು ಚಾಸಾ 18 ರವರ ಹೆಸರಿನಲ್ಲಿರುವ ಕೆಎ.12.ಎ.8880 ರ ನೊಂದಣಿ ಸಂಖ್ಯೆಯ ಆಟೋ ರಿಕ್ಷಾದಲ್ಲಿ ಚಾಸಾ 4 ರವರು ಕುಶಾಲನಗರದಿಂದ ಕರೆದುಕೊಂಡು ಆಟೋವನ್ನು ಚಾಸಾ4 ರವರು ಚಾಲನೆ ಮಾಡಿಕೊಂಡು ಶನಿವಾರಸಂತೆಯ ನಾಗವಾಲಕ್ಕೆ ಹೋಗುತ್ತಿರುವಾಗ ಸಮಯ 6.45 ಪಿ.ಎಂ.ಗೆ ಸೋಮವಾರಪೇಟೆ ಠಾಣಾ ಸರಹದ್ದಿನ ಗಣಗೂರು ಗ್ರಾಮದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಯ ಮುಂದಿನ ಗೋಣಿಮರೂರು ಮಾಲಂಬಿ ಮುಖ್ಯ ರಸ್ತೆಯಲ್ಲಿ ಮಾಲಂಬಿ ಕಡೆಯಿಂದ ಕೆಎ.12.9527 ರ ನೊಂದಣಿ ಸಂಖ್ಯೆಯ ಗೂಡ್ಸ್ ಆಟೋವನ್ನು ಆರೋಪಿಯಾದ ನೀವು ಅತಿ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಹೋಗಿ ಚಾಸಾ 4 ರವರು ಚಾಲನೆ ಮಾಡುತ್ತಿದ್ದ ಆಟೋ ರಿಕ್ಷಾದ ಬಲ ಭಾಗಕ್ಕೆ ಡಿಕ್ಕಿಪಡಿಸಿರುವಿರಿ. ನಿಮ್ಮ ಈ ಕ್ರಮ ಭಾ ದಂ ಸಂ ಕಲಂ 279 ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.

ಅದೇ ದಿನ, ಅದೇ ಸಮಯ, ಅದೇ ಜಾಗದಲ್ಲಿ ಸದರಿ ಅಪಘಾತದಿಂದ ಆಟೋ ರಿಕ್ಷಾ ಾ ಹಿಂದಿನ ಸೀಟಿನ ಬಲಭಾಗದಲ್ಲಿ ಕುಳಿತಿದ್ದ ಭುವನ್ .ಬಿ.ಕೆ ರವರ ಬಲ ಕೈ ಮೂಳೆ ಮುರಿದು ಎದೆಯ ಭಾಗಕ್ಕೆ ನೋವಾಗಿ, ಚಾಸಾ 2 ರವರ ಎಡ ಮೊಳಕೈಗೆ ಸಾಮಾನ್ಯ ಸ್ವರೂಪದ ನೋವುಪಡಿಸಿರುವಿರಿ.

ನಿಮ್ಮ ಈ ಕ್ರಮ ಭಾ ದಂ ಸಂ ಕಲಂ 337 ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.

ಅದೇ ದಿನ, ಅದೇ ಸಮಯ, ಅದೇ ಜಾಗದಲ್ಲಿ ಸದರಿ ಅಪಘಾತದಿಂದ ಚಾಸಾ 2 ರವರನ್ನು ಚಿಕಿತ್ಸೆಗಾಗಿ ಚಾಸಾ1 , 3 ರವರು ಸೇರಿ ಚಾಸಾ 4 ರವರ ಆಟೋದಲ್ಲಿ ಸೋಮವಾರಪೇಟ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಸಮಯ ರಾತ್ರಿ 7045 ಗಂಟೆಗೆ ಭುವನ್.ಬಿ.ಕೆ ರವರು ಮೃತಪಟ್ಟಿರುತ್ತಾರೆ. ನಿಮ್ಮ ಈ ಕ್ರಮ ಭಾ ದಂ ಸಂ ಕಲಂ 337 ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.

ಅದೇ ದಿನ, ಅದೇ ಸಮಯ, ಅದೇ ಜಾಗದಲ್ಲಿ ಕೆಎ.12.9527 ರ ನೊಂದಣಿ ಸಂಖ್ಯೆಯ ವಾಹನಕ್ಕೆ ವಿಮೆ ಇಲ್ಲದೆ ಆರೋಪಿಯಾದ ನೀವು ಚಲಾಯಿಸಿರುವಿರಿ. ನಿಮ್ಮ ಈ ಕ್ರಮ 61466 ರ ಸಹ ಕಲಂ 196 ಐ.ಎಂ.ವಿ ಆ್ಯಕ್ಟ್ ರನ್ವಯ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವಾಗಿದೆ.

ಪ್ರ:1 ಈಗ ಓದಿ ವಿವರಿಸಿದ ದೋಷರೋಪಣೆ ತಿಳಿದಿದೆಯಾ?
ಉಃ ತಿಳಿದಿದೆ

ಪ್ರ:2 ಮೇಲಿನ ದೋಷರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ನಿಮ್ಮ ಪರ ರಕ್ಷಣೆ ಇದೆಯಾ?
ಉಃ ತಪ್ಪು ಮಾಡಿಲ್ಲ

ಮೇಲಿನ ಆರೋಪಣೆಗೆ ನೀವು ಈ ನ್ಯಾಯಾಲಯದ ಮುಂದೆ ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

ಸಹಿ/-

ದಿಃ 12-09-2022 ಪ್ರ ದ ನ್ಯಾ ದಂ, ಸೋ ಪೇಟೆ